ಶ್ರೀ ಕೆ. ಎಚ್. ಪಾಟೀರ್.—ಈಗಾಗಲೇ ಜಿಲ್ಲಾಧಿಕಾರಿಗಳಿಗೆ ತೀರ್ವ ನಿಕಾರೆ ಮಾಡಬೇಕು ಎಂದು ತಿಳಿಸಿದೆ. ಆದರೆ ಸಂಬಂಧಪಟ್ಟ ರೈತರು, ವ್ಯಾಪಾರಸ್ಥರು ಅರ್ಜಿಕೊಟ್ಟು ಮುಂದತು ಕೇಳುತ್ತಿದ್ದಾರೆ. ಅದರಿಂದ ತಡವಾಗಿದೆ. ಅದನ್ನು ತ್ವರಿತವಾದ ರೀತಿಯಲ್ಲಿ ಮುಗಿಸಬೇಕೆಂದು ಆದೇಶ ಕೊಡಲಾಗಿದೆ.

SANCTION OF ANOTHER POLICE STATION FOR HASSAN TOWN.

733. Sri K. M. RUDRAPPA (Sakleshpur).—

Will the Chief Minister be pleased to state :—

(*a*) whether Government is aware of the increase in population of Hassan Town during the last 30 years and also of the proportionate increase in offences;

(*b*) whether it is a fact that during the last 30 years the strength of Police in Hassan town has remained stationary;

(*c*) whether the Government has received representation to sanction another police station (with another Sub-Inspector);

(*d*) if so, the steps taken in the matter ?

Sri H. M. CHANNABASAPPA (Minister for Public Works and Electricity) [on behalf of Sri D. Devaraj Urs (Chief Minister)].—

(*a*) Yes.

(*b*) No.

(*c*) Yes.

(*d*) The matter is being examined.

ಶ್ರೀ ಕೆ ಎಂ. ರುದ್ರಪ್ಪ.—ಆ ವಿಚಾರ ಪರಿಶೀಲನೆ ಮಾಡುತಾ ಇದ್ದೇವೆ. ಮತ್ತು ಅಲ್ಲಿ ಪೋಲೀಸ್ ಸ್ಟೇಷನ್ ಬಗ್ಗೆ ಅವಶ್ಯಕತೆ ಇದೆ ಎಂದು ಹೇಳಿದ್ದೀರಿ. ಆದಷ್ಟು ಬೇಗ ಹಾಸ್ಯಕ್ಕೆ ಅಡಿಷನರ್ ಪೋಲೀಸ್ ಸ್ಟೇಷನ್ ಕೊಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪೋಲೀಸ್ ಸ್ಟೇಷನ್ ಕೊಡಬೇಕೇ. ಪೋಲೀಸ್ ಸಿಬ್ಬಂದಿಯನ್ನು ಹೆಚ್ಚು ಮಾಡಬೇಕೇ ಎಂದು ಪರಿಸ್ಥಿತಿಯನ್ನು ನೋಡಿಕೊಂಡು ಸೂಕ್ತ ಕಾರ್ಯ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಎಚ್. ಹನುಮೇಗೌಡ.— ಮೂವತ್ತು ವರ್ಷಗಳ ಹಿಂದೆ ಹಾಸನ ಟೌನ್‌ನಲ್ಲಿ ಇಪ್ಪತ್ತು ಸಾವಿರ ಜನಸಂಖ್ಯೆಗೆ ಎಷ್ಟು ಪೋಲೀಸ್ ಫೋರ್ಸ್ ಇದೆಯೋ ಅಷ್ಟೇ ಪೋಲೀಸ್ ಫೋರ್ಸ್ 65 ಸಾವಿರ ಪ್ರಜಾಸಂಖ್ಯೆ ಆದರೂ ಇದೆ. ಕಳೆದ 2 ವರ್ಷಗಳ ಹಿಂದೆ ಅಲ್ಲಿಯ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಅವರು ಸರ್ಕಾರಕ್ಕೆ ಒಂದು ಕಾಗದ ಬರೆದು, ಪೋಲೀಸ್ ಫೋರ್ಸ್ ಬಹಳ ಕಮ್ಮಿ ಇದೆ, ಜನಸಂಖ್ಯೆ ಜಾಸ್ತಿ ಆದಹಾಗೆಲ್ಲ ಕ್ರೈಮ್‌ಗಳು ವಿಪರೀತವಾಗಿ ಜಾಸ್ತಿಯಾಗುತ್ತಿದೆ, ಅವನ್ನು ಹತೋಟಿಗೆ ತರಬೇಕಾದರೆ ಸಾಕಷ್ಟು ಪೋಲೀಸ್ ಫೋರ್ಸ್ ಬೇಕಾಗುತ್ತದೆ ಮತ್ತು ಬೇರೆ ಬೇರೆ ಸ್ಥಳದಲ್ಲಿ ಪೋಲೀಸ್ ಸ್ಟೇಷನ್ ಮಾಡಬೇಕಾಗುತ್ತದೆ ಎಂದು ಶಿಫಾರಸು ಕಳುಹಿಸಿದ್ದರೂ ಕೂಡ ಇದುವರೆಗೂ ಅದರ ಮೇಲೆ ಏತಕ್ಕೆ ಕ್ರಮ ತೆಗೆದುಕೊಂಡಿಲ್ಲ ? ತೆಗೆದುಕೊಳ್ಳುವುದಕ್ಕೆ ತೊಂದರೆ ಏನು ಎಂಬುದನ್ನು ದಯವಿಟ್ಟು ತಿಳಿಸಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಹೇಳುವಷ್ಟು ಪರಿಸ್ಥಿತಿ ಭೀಕರವಾಗಿಲ್ಲ. ಅಂಕಿಅಂಶಗಳನ್ನು ಪರಿಶೀಲಿಸಿ ಜನಸಂಖ್ಯೆ ಹೆಚ್ಚಾದ ಪಕ್ಷದಲ್ಲಿ ಪೋಲೀಸ್ ಸ್ಟೇಷನ್ ಹೆಚ್ಚು ಮಾಡುವ ಪ್ರಶ್ನೆ ಇಲ್ಲ, ಕ್ರೈಮ್ ಏನು ಇದೆ ಅದನ್ನು ನೋಡಿಕೊಂಡು ಕ್ರಿಮಿನಲ್ ಆಕ್ಟಿವಿಟೀಸ್ ಹೆಚ್ಚು ಆದರೆ ಪೋಲೀಸ್ ಸ್ಟೇಷನ್ ಹೆಚ್ಚು ಆಗಬೇಕು. ಬರೇ ಜನಸಂಖ್ಯೆ ಹೆಚ್ಚಾ ಆದಹಾಗೆ ಪೋಲೀಸ್ ಸ್ಟೇಷನನ್ನು ಜಾಸ್ತಿ ಮಾಡಬೇಕು ಎಂದು ಇಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ.—ಕ್ರೈಮ್ಸ್ ಜಾಸ್ತಿಯಾಗಿದೆ, ರಾಬರಿ ಜಾಸ್ತಿ ಯಾಗಿದೆ. ಅನೇಕ ಇಂಡಸ್ಟ್ರೀಸ್ ಬಂದಿರುವುದರಿಂದ ಜನಸಂಖ್ಯೆ ಜಾಸ್ತಿಯಾಗಿದೆ, ಅಲ್ಲ ಮರ್ಯಾದಸ್ತ ಜನ ತಿರುಗಾಡುವುದೂ ಕಷ್ಟವಾಗಿದೆ. ಅದಕ್ಕೋಸ್ಕರ ಪೋಲೀಸ್ ಸ್ಟೇಷನ್ ಜಾಸ್ತಿ ಮಾಡಿ ಎಂದು ಕೇಳುತ್ತಿರುವುದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ಟೇಟ್ ಆವರೇಜೆಸ್‌ಗಿಂತ ಅಲ್ಲಿ ಕ್ರೈಮ್ ಬಹಳ ಕಮ್ಮಿ ಇದೆ. ಪಾಪುಲೇಷನ್ ಬೇಸಿಸ್‌ಮೇಲೆ ತೆಗೆದುಕೊಂಡರೂ ಕೂಡ ತಾವು ಹೇಳುವಷ್ಟು ಭೀಕರ ಸ್ಥಿತಿಯಲ್ಲಿ ಇಲ್ಲ. ಆದಾಗ್ಯೂ ಈವತ್ತಿನ ದಿವಸ ಈ ಪರಿಸ್ಥಿತಿಗೆ ಅವಶ್ಯಕವಾದ ಪ್ರಮಾಣದಲ್ಲಿ ಪೋಲೀಸ್ ಫೋರ್ಸನ್ನು ಹೆಚ್ಚಿಗೆ ಮಾಡಬೇಕು ಎನ್ನುವ ವಿಷಯದಲ್ಲಿ ನಮಗೆ ನಿಮಗೆ ಭಿನ್ನಾಭಿಪ್ರಾಯವಿಲ್ಲ. ಏನು ಮಾಡಬೇಕು ಎನ್ನುವುದಕ್ಕೆ ಐ. ಜಿ. ಪಿ. ಯವರು ರಿಪೋರ್ಟ್ ಕಳಿಸಿಕೊಟ್ಟಿದ್ದಾರೆ ಇದಕ್ಕೆ ನುಮಾರು ಒಂದು ಲಕ್ಷ ನಲವತ್ತೇಳು ಸಾವಿರ ಚಿಲ್ಲರೆ ರೂಪಾಯಿಗಳು ಆಗುತ್ತವೆ. ಆದರೂ ಪರವಾಗಿಲ್ಲ. ಯೋಚನೆ ಮಾಡಿ ಯಾವ ರೀತಿಯಲ್ಲಿ ತಮಗೆ ಹೆಚ್ಚಿನ ಹೊಸ ರಕ್ಷಣಾ ಸಹಾಯ ಸಾಲಭ್ಯವನ್ನು ಒದಗಿಸಬೇಕು ಎನ್ನುವುದು ಸರ್ಕಾರದ ಗಮನದಲ್ಲಿ ಇದೆ. ರಿಪೋರ್ಟನ್ನು ಪರಿಶೀಲನೆ ಮಾಡುತ್ತಾ ಇದ್ದೇವೆ. ಆದಷ್ಟು ಬೇಗ ಆದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಎಂ. ರುದ್ರಪ್ಪ.—ಕ್ರೈಮ್‌ಗಳು ಜಾಸ್ತಿಯಾಗಿದೆ ಎಂದು ಒಪ್ಪಿಕೊಂಡಿದ್ದೀರಿ. ಪೋಲೀಸ್ ಜಾಸ್ತಿ ಕೊಟ್ಟಿರುವುದು ಸಾಕಾಗುವುದಿಲ್ಲ. ಸಬ್ ಇನ್ಸ್‌ಪೆಕ್ಟರ್ ಒಳಗೊಂಡಂತೆ ಜಾಸ್ತಿ ಪೋಲೀಸ್ ಸ್ಟೇಷನ್ ಕೇಳಿರುವುದು ಅದನ್ನು ಬೇಗ ಕೊಡುತ್ತೀರಾ ?

ಶ್ರೀ ಎಚ್. ಎಂ ಚನ್ನಬಸಪ್ಪ.—ನಾನು ಹೇಳದೆ ಇದ್ದುದನ್ನು ನನ್ನ ಬಾಯಲ್ಲಿ ಹೇಳಿಸಬೇಕು ಎಂದು ಕಾಣುತ್ತದೆ. ತಾವು ಕೇಳುವ ಪ್ರಶ್ನೆ ಅರ್ಥವಾಗಲಿಲ್ಲ.

ಶ್ರೀ ಕೆ. ಎಂ. ರುದ್ರಪ್ಪ.—ಪೋಲೀಸ್ ಫೋರ್ಸ್ ಜಾಸ್ತಿ ಮಾಡಿದರೆ ಸಾಕಾಗದು. ಅಲ್ಲಿ ಕ್ರೈಮ್ಸ್ ಜಾಸ್ತಿ ಆಗಿರುವುದರಿಂದ, ಇನ್ನೊಂದು ಸಬ್ ಇನ್ಸ್‌ಪೆಕ್ಟರ್ ಇರುವ ಸ್ಟೇಷನ್ ಬೇಕು. ಅಡಿಷನರ್ ಪೋಲೀಸ್ ಸ್ಟೇಷನ್ ಕೊಡಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಹೇಳಿದೆ ತಾವು ಹೇಳುವ ಅಭಿಪ್ರಾಯವನ್ನು ಗಮನಕ್ಕೆ ತೆಗೆದುಕೊಳ್ಳುತ್ತೇವೆ ಎಂದು. ಇವರೂ ಪತ್ರ ಬರೆದಿದ್ದಾರೆ. ಅದನ್ನೂ ಗಮನಕ್ಕೆ ತೆಗೆದು ಕೊಳ್ಳುತ್ತೇವೆ. ಐ. ಜಿ. ಪಿಯವರಿಗೆ ಪ್ರೊಪೋಸರ್ ಕಳುಹಿಸಿದ್ದಾರೆ. ಅದನ್ನು ಗಮನಕ್ಕೆ ತೆಗೆದು ಕೊಂಡು ಯಾವುದು ಅವಶ್ಯವೂ ಅದನ್ನು ಮಾಡೋಣ.

REORGANISATION OF TALUKS AND DISTRICTS

760. Sri S. BANGARAPPA (Sorab) :—

Will the Minister for Revenue be pleased to state :—

(*a*) whether a Commission has been appointed by the Government for the purpose of reorganisation of taluks and districts in the State ;

(*b*) if so, the powers and functions of the Commission ;

(*c*) when the Commission is going to submit its report to Government ?